ಓ ಎಸ್ ನಂ. 69/2019

ಡಿ .ಡಬ್ಲ್ಯೂ :1

ದಿನಾಂಕ : 12-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ಸರ್ವೆ ನಂ. 55/2 ರಲ್ಲಿ 10 ನೇ ಪ್ರತಿವಾದಿಯು ರಸ್ತೆಗಾಗಿ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಂಡಿದ್ದಾರೆ . ಸದರಿ ಸ್ವತ್ತಿನ ಪರಿಹಾರದ ಹಣದ ಸಂಬಂಧ ತಕರಾರು ಇದ್ದ ಕಾರಣ ಮೊತ್ತವನ್ನು 10 ನೇ ಪ್ರತಿವಾದಿಯು ತುಮಕೂರಿನ ಮಾನ್ಯ 7 ನೇ ಜಿಲ್ಲಾ ನ್ಯಾಯಾಲಯದಲ್ಲಿ ಸಿ ಮಿಸ್ 619/2020 ರ ಪ್ರಕರಣದಲ್ಲಿ ಠೇವಣಿ ಇರಿಸಿದ್ದಾರೆ ಎಂದರೆ ಸರಿ . ನಾನು ಸದರಿ ಪ್ರಕರಣದಲ್ಲಿ ವಕೀಲರನ್ನು ನೇಮಿಸಿಕೊಂಡು ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿ . ಸದರಿ ತಕರಾರಿನಲ್ಲಿ 1995 ರಲ್ಲಿ ಪಂಚಾಯಿತಿ ಪಾರಿಕತ್ ಮಾಡಲಾಗಿದೆ ಎಂದು ತಿಳಿಸಿದ್ದೇನೆ ಎಂದರೆ ಸರಿ . ಸದರಿ ಪಂಚಾಯಿತಿ ಪಾರಿಕತ್ ನನ್ನ ತಂದೆ ರಂಗಯ್ಯ ಚಿಕ್ಕಪ್ಪ ನರಸಿಂಹಯ್ಯ ರವರ ನಡುವೆ ನಡೆದಿತ್ತು . ನನ್ನ ತಂದೆ 26-06-1993 ರಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ . ಮೇಲೆ ಹೇಳಿದಂತೆ ಠೇವಣಿ ಇಟ್ಟಿರುವ ಭೂ ಸ್ವಾಧೀನದ ಪರಿಹಾರದ ಹಣ ಈ ದಾವೆಯ ಎಲ್ಲಾ ಪಕ್ಷಗಾರರಿಗೂ ಸೇರಬೇಕು ಎಂದರೆ ಸರಿ .

ದಾವಾ ಷೆಡ್ಯೂಲ್ 6 ನೇ ಸ್ವತ್ತು ಪ್ರಸ್ತುತ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ . ದಾವಾ ಷೆಡ್ಯೂಲ್ 6 ನೇ ಸ್ವತ್ತು ನನ್ನ ಮತ್ತು 5 ಹಾಗೂ 6 ನೇ ಪ್ರತಿವಾದಿಗಳ ಜಂಟಿ ಹೆಸರಿನಲ್ಲಿದೆ ಎಂದರೆ ಸರಿ. ಒಟ್ಟು ಕುಟುಂಬದ ಸ್ವತ್ತುಗಳು ಇನ್ನೂ ವಿಭಾಗವಾಗಿಲ್ಲದ ಕಾರಣ ಸದರಿ ಸ್ವತ್ತು ನಮ್ಮ ಜಂಟಿ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ವಿಭಾಗವಾಗಿದೆ ಎಂದು ತಿಳಿಸಿದ್ದಾರೆ . ಸದರಿ ಸ್ವತ್ತು ಇನ್ನೂ ಸಹಾ ಒಟ್ಟು ಕುಟುಂಬದ ಸ್ವತ್ತಾಗಿದೆ , ಆದರೂ ಸಹಾ ವಿಭಾಗವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅರೇನಹಳ್ಳಿ ಗ್ರಾಮದ ಸರ್ವೆ ನಂ. 35 ಸ್ವತ್ತು ನನ್ನ ತಾತನ ತಮ್ಮನ ಮಗನ ಹೆಸರಿನಲ್ಲಿದೆ . ಅದೇ ಗ್ರಾಮದ ಸರ್ವೆ ನಂ. 14 ರ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿದೆ . ಯಗಚೀಕಟ್ಟೆ ಗ್ರಾಮದ ಸರ್ವೆ ನಂ. 17 ಸ್ವತ್ತು ನಮ್ಮ ಕುಟುಂಬಕ್ಕೆ ಸೇರಿಲ್ಲ ಎಂದರೆ ಸರಿ . ಅರೇನಹಳ್ಳಿ ಗ್ರಾಮದ

ಸರ್ವೆ ನಂ. 40 ನಮ್ಮ ಕುಟುಂಬಕ್ಕೆ ಸೇರಿದ್ದು ಎಂದು ತೋರಿಸಲು ಪಾರಿಕತ್ ಹಾಜರುಪಡಿಸಿದ್ದೇನೆ . ದಾವಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಸ್ವತ್ತಾಗಳಾಗಿವೆ , ನಾವು ಅವುಗಳನ್ನು ಇನ್ನೂ ವಿಭಾಗಿಸಿಕೊಂಡಿಲ್ಲ , ಆದರೂ ಸಹಾ ವಿಭಾಗವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 1 ಮತ್ತು 3 ನೇ ಸ್ವತ್ತುಗಳು ಗುಬ್ಬಿಯ ಬಿ ಹೆಚ್ ರಸ್ತೆಗೆ ಹೊಂದಿಕೊಂಡಂತೆ ಇರುವ ಸ್ವತ್ತುಗಳು ಎಂದರೆ ಸರಿ . ಅವು ಹೆಚ್ಚು ಬೆಳೆಬಾಳುವ ಸ್ವತ್ತುಗಳು ಎಂದರೆ ಸರಿ . ಅದೇ ಕಾರಣಕ್ಕಾಗಿ ನಾನು ರೆವಿನ್ಯೂ ಅಧಿಕಾರಿಗಳೊಡನೆ ಶಾಮೀಲಾಗಿ ಸದರಿ ಸ್ವತ್ತುಗಳ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ .

ಪಂಚಾಯಿತಿ ಪಾರಿಕತ್ ನ ಆಧಾರದಲ್ಲಿ ನನ್ನ ಮತ್ತು ನನ್ನ ಸಹೋದರರ ಹೆಸರಿಗೆ ನಮ್ಮ ಭಾಗದ ಸ್ವತ್ತುಗಳ ಖಾತೆ ದಾಖಲಾಗಿದೆ . 5 ನೇ ಪ್ರತಿವಾದಿಯ ಹೆಸರಿಗೆ ಅವರ ತಂದೆ ದೊಡ್ಡನರಸಯ್ಯ ರವರು ಮರಣ ಶಾಸನ ಬರೆಯಲು ಸ್ವತ್ತಿನ ಖಾತೆಗೆ ಅವರ ಹೆಸರಿಗೆ ದಾಖಲಾಗಿತ್ತೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ತಿಳಿಸಿದ್ದಾರೆ . ಸೃಷ್ಟಿಸಿದ ದಾಖಲೆಯ ಆಧಾರದಲ್ಲಿ ನಮ್ಮ ಹೆಸರಿಗೆ ಖಾತೆ ಪಹಣಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ . ನಿಡಿ -12 ರ ದಾಖಲೆ ನಮ್ಮ ಅನುಕೂಲಕ್ಕೆ ತಕ್ಕಂತೆ ನಾವು ಸೃಷ್ಟಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳಲ್ಲಿ ಮತ್ತು ಭೂಸ್ವಾಧೀನದ ಪರಿಹಾರದ ಹಣದಲ್ಲಿ ಉಳಿದವರಿಗೆ ಭಾಗಾಂಶ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಪಂಚಾಯಿತಿ ಪಾರಿಕತ್ ಮಾಡಿಕೊಂಡಿದ್ದೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಭೂ ಸ್ವಾಧೀನದ ಪರಿಹಾರದ ಹಣದ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಲಾಗಿದೆ ಎಂದರೆ ಸರಿಯಲ್ಲ . ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವುದು ತಿಳಿದಿದೆಯೇ ಎಂದರೆ ಸಾಕ್ಷಿಯು ಅವರು ಸಲ್ಲಿಸಿದ್ದಾರೆ ಎಂದು ತಿಳಿಸಿದ್ದಾರೆ . ಎಲ್ಲಾ ವಿಚಾರ ತಿಳಿದಿದ್ದರೂ ಸಹಾ ಸುಳ್ಳು ವಿವರಗಳ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳಲ್ಲಿ ಮತ್ತು ಭೂಸ್ವಾಧೀನದ ಪರಿಹಾರದ ಹಣದಲ್ಲಿ ವಾದಿಗೂ ಸಹಾ ಭಾಗಾಂಶದ ಹಕ್ಕು ಇದೆ ಆದರೂ ಸಹಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಖಾತಾ ನಂ . 16 ರ ಸ್ವತ್ತು ಪ್ರಸ್ತುತ ನಾಗರಾಜು ರವರ ಹೆಸರಿನಲ್ಲಿದೆ . ವಾದಿಯ ತಂದೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಆ ಸಂಬಂಧ ದಾಖಲೆಯನ್ನು

ಹಾಜರುಪಡಿಸಿದ್ದೇನೆ . ಖಾತಾ ನಂ . 16 ರ ಸ್ವತ್ತು ನಿಮ್ಮ ಹೆಸರಿನಲ್ಲಿ ಇಲ್ಲ ಎಂದರೆ ಸಾಕ್ಷಿಯು ನಾನು ಖಾತೆ ಮಾಡಿಸಿಕೊಂಡಿಸಿದ್ದೇನೆ ಎಂದು ತಿಳಿಸಿದ್ದಾರೆ . ಸದರಿ ಸ್ವತ್ತಿಗೆ ಸಂಬಂಧಿಸಿ ಸುಳ್ಳು ವಿವರಗಳ ದಾಖಲೆಯನ್ನು ಹಾಜರುಪಡಿಸಿ ಖಾತೆ ಮಾಡಿಸಿಕೊಂಡಿದ್ದೇನೆ ಆದರೂ ಸಹಾ ವಾದಿಯ ತಂದೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .